ಪೌನಿ/ ಸನಿ/ ಆಸಿ/ ಸಿಆರ್/58/2001-02

ಪೌರಾಡಳಿತ
ನಿರ್ದೇಶನಾಲಯ

ಬೆಂಗಳೂರು, ದಿನಾಂಕ : 04-02-2002

**ಸುತ್ತೋಲೆ**

ವಿಷಯ :- 'ಪಟ್ಟಣಗಳ' ಕನ್ನಡೀಕರಣಕ್ಕಾಗಿ ಕೆಲವು ಅಂಶಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.

ಉಲ್ಲೇಖ : ಮಾನ್ಯ ಪೌರಾಡಳಿತ ರಾಜ್ಯ ಸಚಿವರ ಟಿಪ್ಪಣಿ
ಸಂ : ಪೌರಾಸ/ಟಿ/3037/2002.
ದಿನಾಂಕ 21-01-2002.

ಮಾನ್ಯ ಪೌರಾಡಳಿತ ರಾಜ್ಯ ಸಚಿವರು ತಮ್ಮ ಉಲ್ಲೇಖಿತ ಟಿಪ್ಪಣಿಯೊಂದಿಗೆ ಕಳುಹಿಸಿರುವ ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ರವರ ಪತ್ರದಲ್ಲಿ ಪಟ್ಟಣಗಳ ಕನ್ನಡೀಕರಣಕ್ಕಾಗಿ ಕೆಲವು ಅಂಶಗಳನ್ನು ಅನುಷ್ಠಾನಗೊಳಿಸಲು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನ ನೀಡಲು ಸೂಚಿಸಿರುವ ಹಿನ್ನೆಲೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಸೂಚಿಸಿರುವ ಅಂಶಗಳ ಬಗ್ಗೆ ಎಲ್ಲಾ ನಗರಸಭೆ/ ಪುರಸಭೆ/ ಪಟ್ಟಣ ಪಂಚಾಯಿತಿಗಳಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.

1. ಹೆಸರಿಲ್ಲದ ರಸ್ತೆಗಳು, ಹೊಸಬಡಾವಣೆಗಳು, ವೃತ್ತಗಳು, ಉದ್ಯಾನಗಳಿಗೆ ಕನ್ನಡದ ಕವಿಗಳು, ಚಿಂತಕರು ಹಾಗೂ ಸ್ಥಳೀಯ ಮಹತ್ವದ ವ್ಯಕ್ತಿಗಳ ಹೆಸರುಗಳನ್ನು ಇಡುವುದು.

2. ಈಗಾಗಲೇ ಹೆಸರಿರುವ ಕಡ ವಿವಾದಕ್ಕೆ ಎಡೆ ಮಾಡದಂತೆ, ಹಾಗೂ ಅತ್ಯಗತ್ಯವಾದ ಕಡೆ ಹೆಸರುಗಳನ್ನು ಬದಲಾಯಿಸುವುದು.

3. ಜಾಹಿರಾತು ಫಲಕಗಳಿಗೆ ಪರವಾನಗಿ ಕೊಡುವಾಗ ಅವುಗಳಲ್ಲಿ ಸಂಬಂಧಪಟ್ಟ ಸರಕಿನ ಹೆಸರನ್ನು ಒಳಗೊಂಡಂತೆ ಎರಡು ಮೂರು ಸಾಲುಗಳನ್ನಾದರೂ ಕನ್ನಡದಲ್ಲಿರಬೇಕೆಂದು ಷರತ್ತನ್ನು ವಿಧಿಸಬೇಕು.

4. ಅಂಗಡಿ ಮುಂತಾದವುಗಳಿಗೆ ಪರವಾನಗಿ ಕೊಡುವಾಗ ನಾಮಫಲಕಗಳಲ್ಲಿ ಕನ್ನಡವನ್ನು ಅಗ್ರಸ್ಥಾನದಲ್ಲಿ ಬಳಸದೆ ಇದ್ದರೆ ಪರವಾನಗಿಯನ್ನು ರದ್ದುಮಾಡಲಾಗುತ್ತದೆಂಬ ನಿಬಂಧನೆಯನ್ನು ಅಳವಡಿಸಬೇಕು.

5. ಉದ್ಯಾನವನಗಳಲ್ಲಿ ಸೂಕ್ತ ಸ್ಥಳಗಳಲ್ಲಿ ಉದ್ಯಾನವನದ ಅಂದಕೆಡದಂತೆ, ಕನ್ನಡಪರ ಸೂಕ್ತಿಗಳನ್ನುಳ್ಳ ಚಿಕ್ಕಫಲಕಗಳನ್ನು ಸ್ಥಾಪಿಸುವುದು. ಇವುಗಳನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಸಿದ್ಧಮಾಡಿಕೊಡುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಎಲ್ಲಾ ಪೌರಾಯುಕ್ತರು/ ಮುಖ್ಯಾಧಿಕಾರಿಗಳು ತಮ್ಮ ನಗರ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ನಿಯಮಾನುಸಾರ ಪರಿಶೀಲಿಸಿ, ಅನುಷ್ಠಾನಗೊಳಿಸಬೇಕೆಂದು ಸೂಚಿಸಿದೆ.

ಸಹಿ/-

**(ಜಿ. ವಿ. ಕೊಂಗವಾಡ್)**

ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ

ಬೆಂಗಳೂರು.

ಗೆ,

ರಾಜ್ಯದ ಎಲ್ಲಾ ಪೌರಾಯುಕ್ತರು :

ಮುಖ್ಯಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ,

ಪ್ರತಿಯನ್ನು:

1. ಸರ್ಕಾರದ ಕಾರ್ಯದರ್ಶಿಗಳು, ನೆ. ಮತ್ತು ನ. ಪ್ರಾಧಿಕಾರ, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು.
2. ಮಾನ್ಯ ಪೌರಾಡಳಿತ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು ರವರಿಗೆ ಮಾಹಿತಿಗಾಗಿ.
3. ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು.
4. ಕಛೇರಿ ಪ್ರತಿ.